ಸ್ಥಾಪನೆಯಾಗಿಬಿಡುತ್ತವೆ. ಆದರೆ, ಅವು ನಿರಪೇಕ್ಷವಲ್ಲ. ಈ ಕಾರಣದಿಂದಾಗಿಯೇ ಅಪೇಕ್ಷೆಯೊಡನೆ ಅದರ ಇತಿಹಾಸ, ಕಥೆ, ಘಟನೆ, ಮಾತು, ಮನಸ್ತಾಪಗಳೂ ಅಲ್ಲಿ ಸ್ಥಾಪಿತವಾಗುತ್ತವೆ. ಇಲ್ಲಿಯ ಅಸಂಬಂಧವನ್ನು ಪೂರ್ಣ ಸಂಬಂಧವಾಗಿಸಿಕೊಳ್ಳುವುದೇ ಜೀವನದ ದೊಡ್ಡ ಹೋರಾಟ. ಇಂತಲ್ಲಿ ಹೊರಗಿನ ಸಂಬಂಧಗಳೇ ಅರ್ಥಪೂರ್ಣ ಎಂದು ಅನೇಕ ಸಲ ಅನಿಸಿಬಿಡುವುದು. ಆದರೆ, ಅಲ್ಲಿ ಸೋಲಾದಾಗ ರಕ್ತ ಸಂಬಂಧಕ್ಕಿಂತ ಮಿಗಿಲು ಯಾವುದು? ಎಂಬ ಇನ್ನೊಂದು ಸಮರ್ಥನೆ ಶುರುವಾಗುವುದು. ಇಂತಲ್ಲಿ ಅದನ್ನು ಅರಿಯುವುದು, ಅರಿಯುವಲ್ಲಿ ಹಾದಿ ತಪ್ಪುವುದು. ಹಾದಿ ತಪ್ಪಾದರೂ ಅದು ಸರಿ ಎಂದು ಭ್ರಮಿಸುವುದು, ತಪ್ಪೆಂದು ತಿಳಿದಾಗಲೂ ಒಪ್ಪಿಕೊಳ್ಳಲು ಸಿದ್ಧರಾಗದಿರುವುದು, ಎಲ್ಲ ಸರಿಯಾದಾಗಲೂ ಸಂದೇಹ ತಾಳುವುದು. ಹೀಗೆ ನಾವು ಸಂಬಂಧವನ್ನು ಕಾಪಾಡಿಕೊಳ್ಳುತ್ತಿದ್ದೇವೆಯೇ ಇಲ್ಲ ಅಸಂಬಂಧವನ್ನು ಪೋಷಿಸುತ್ತಿದ್ದೇವೆಯೋ ಎಂಬ ದ್ವಂದ್ವ ಸದಾ ನಮ್ಮೊಡನೆ ಇದೆ. ಅಲಿ ಸರ್ದಾರ್ ಜಾಫ್ರಿಯವರ ಉರ್ದು ಕವಿತೆಯ ಸಾಲೊಂದು ಹೀಗಿದೆ:

ಬದುಕಿನ ನೀರನ್ನು ನಾನು ಕುಡಿಯಲಾಗದಿದ್ದರೆ
ಬಾಯಾರಿಕೆಯ ಬೆಂಕಿಯಲ್ಲಿ ಉರಿಯಲು ನನಗೆ ಭೀತಿ

ನೀರು ಮತ್ತು ಬಾಯಾರಿಕೆಯ ಒಳಗುದಿಯು ನಮ್ಮ ಸ್ವಭಾವವನ್ನೇ ಏರುಪೇರಾಗಿಸುವುದರಿಂದ ನಮ್ಮ ಹೆಜ್ಜೆಗಳು ಹಲವು ಬಾರಿ ತಡವರಿಸುತ್ತವೆ. ಹೆಜ್ಜೆಗಳು ದಿಕ್ಕೆಟ್ಟಾಗ ಮಾತು ಬಾಯಿ ತಪ್ಪುತ್ತದೆ. ಇಂತಲ್ಲಿ ಸಂಬಂಧಕ್ಕಿಂತ ಅದರ ತೋರುವಿಕೆ ಮತ್ತು ನಿರ್ವಹಣೆಯೇ ಮುಖ್ಯವಾಗಿ ಬಿಡುವುದು. ಒಂಬತ್ತು ತಿಂಗಳು ಹೊತ್ತು ಹೆತ್ತು ಸಾಕಿದ ಕರುಳ ಸಂಬಂಧ, ಪ್ರಾಣಕ್ಕೆ ಪ್ರಾಣ ಕೊಡುವವನೇ ನಿಜವಾದ ಗೆಳೆಯ, ಅಪ್ಪಅಮ್ಮ ನಮ್ಮ ಹುಟ್ಟಿಗೆ ಕಾರಣರು; ಆದರೆ ನಾವು ಅದರ ಅಡಿಯಾಳುಗಳಲ್ಲ, ನೀವು ಹೇಗೆ ಬದುಕಿದಿರೋ ನಮಗೆ ಗೊತ್ತಿಲ್ಲ ಆದರೆ ನಮಗೆ ನಮ್ಮ ಲೈಫ್ ಮುಖ್ಯ, ಮಮ್ಮಿ ನನಗೆ ಹರ್ಟ್ ಆಗುತ್ತೆ ಹೀಗೆ ಮಾತಾಡಬೇಡಿ, ಕೈಹಿಡಿದವಳು ಬೇಕೋ ಹೆತ್ತವಳು ಬೇಕೋ, ಮಿತ್ರ ದ್ರೋಹ, ಮುತ್ತುಕೊಡುವವಳು ಬಂದಮೇಲೆ ತುತ್ತು ಕೊಟ್ಟವಳು ಯಾಕೆ? ನನಗೆ space ಕೊಡಿ.

ಹೀಗೆ ಇವುಗಳ ಅರ್ಥ ಕ್ರಿಯೆ ಪ್ರತಿಕ್ರಿಯೆಗಳ ಗೊಂದಲದಲ್ಲಿ ನಮ್ಮ ಸ್ವಭಾವದ ಸಂಕುಚನ ವಿಕಸನಗಳು ತಿಳಿಯದೇ ಹೋಗುವುದು. ಕೆಲಸವಿದ್ದಾಗ ಮಾತ್ರ ಮಾತನಾಡಿಸುವುದು, ಎದುರು ಕಂಡಾಗಲೂ ಕಣ್ಣು ತಪ್ಪಿಸಿ ಮುಂದೆ ಹೋಗುವುದು, ಫೋನ್ ಮಾಡಿದಾಗ ನಾನು ಈಗ ನಿಮಗೇ ಫೋನ್ ಮಾಡಬೇಕೆಂದಿದ್ದೆ ಅನ್ನುವುದು. ಬೇಕಿದ್ದಾಗ ಹೊಗಳುವುದು, ಬೇಡದಿದ್ದಾಗ ಬಿಡುವುದು, ಮಾತು ಬಿಡುವುದು, ಇನ್ನೊಬ್ಬರ ಬಳಿ ಲಘುವಾಗಿ ಮಾತನಾಡುವುದು, ಅನುಪಸ್ಥಿತಿಯಲ್ಲಿ ಲೇವಡಿ ಮಾಡುವುದು, ಇರುವ ಕಾಲೋನಿಯಲ್ಲಿ ಮಾತನಾಡಿಸದೆ ಹೊರ ಊರಿನಲ್ಲಿ ಸಿಕ್ಕಾಗ ಮಾತ್ರ ಮಾತನಾಡಿಸುವುದು, ಫೇಸ್‌ಬುಕ್‌ನಲ್ಲಿ ಮಾತ್ರ ಚಾಟ್ ಮಾಡುವವರು ಇಷ್ಟೆಲ್ಲ ಮಾಡಿಯೂ ನಮ್ಮ ಸಂಬಂಧ ಎಷ್ಟೋ ಹಳೆಯದು ಎಂದು ಕ್ಲೈಮ್ ಮಾಡುವುದು, ರಾಜಕಾರಣದಲ್ಲಿ ಯಾರೂ ಶತ್ರುಗಳಲ್ಲ ಎನ್ನುವುದು ಹೀಗೆ ಸಂಬಂಧವೆನ್ನುವುದು ಯಾಕೋ ಸರಳವಲ್ಲ ಎಂಬುದು ಹೆಜ್ಜೆ ಹೆಜ್ಜೆಗೂ ಖಾತರಿಯಾಗುತ್ತಿರುತ್ತದೆ.

ಕೆ. ಸತ್ಯನಾರಾಯಣರ 'ಮಧುಗಿರಿಧಾಮ ಮತ್ತು ಸಾಹಿತಿ ಮುದುಕಪ್ಪ' ಕತೆಯಲ್ಲಿ ಪಾತ್ರವೊಂದು, 'ಯಾರಿಗೆ ಬೇಕಿರುತ್ತೆ ನಮ್ಮ ಒಳಜಗತ್ತು; ಅಂತರಂಗ. ಅದನ್ನೆಲ್ಲ ಇನ್ನೊಬ್ಬರು ಗ್ರಹಿಸ್ತಾರೆ, ಅರ್ಥ ಮಾಡಿಕೋತಾರೆ, ಪ್ರೀತಿ ಮಾಡತಾರೆ ಅಂತ ನಿರೀಕ್ಷೆ ಮಾಡೋದೇ ತಪ್ಪು. ಯಾರೇ ಆದರೂ ನಮ್ಮ ಬಗ್ಗೆ ಗ್ರಹಿಸೋದು ಅವರಿಗೆ ಬೇಕಾದಷ್ಟನ್ನು ಮಾತ್ರ. ಅದು ಮಾತ್ರ ಅವರ ಸತ್ಯ. ಉಳಿದದ್ದೆಲ್ಲ ನಮ್ಮೊಳಗೇ ಉಳಿದು, ನಮ್ಮೊಡನೇ ಕರಗಿ ಹೋಗಿ ಒಂದು ದಿನ ಹಿಡಿ ಬೂದಿಯಾಗಿಬಿಡುತ್ತೆ' ಎಂದು ನುಡಿಯುತ್ತದೆ. ವಾಸ್ತವವಾಗಿ ಇದು ಹೊಸ ಮಾತೇನಲ್ಲ. ಒಂದಲ್ಲಾ ಒಂದು